**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.647/2021**

ಪಿ.ಡಬ್ಲ್ಯೂಃ 7

ಸಿ.ಡಬ್ಲ್ಯೂಃ 7

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಜಯರಾಮ್ |
| ತಂದೆಯ ಹೆಸರುಃ | ಃ | ಯಳಮೆಗೌಡ |
| ವಯಸ್ಸು | ಃ | **58 ವರ್ಷ** |
| ಉದ್ಯೋಗ | ಃ | ಟೈಲರಿಂಗ್ |
| ವಾಸಸ್ಥಳ | ಃ | ರಂಗೇನಹಳ್ಳಿ |

**ದಿನಾಂಕ: 07-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-1 ರವರ ಒಡವೆಗಳು ಕಳ್ಳತನವಾಗಿದ್ದು, ಆದಾದ ನಂತರ ಎರಡು ತಿಂಗಳ ನಂತರ ಚಾಸಾ-1 ರವರಿಗೆ ತರೀಕೆರೆಯ ಪೊಲೀಸ್ ಠಾಣೆಯಲ್ಲಿ ಒಡವೆಗಳನ್ನು ಕೊಡುವುದರ ಬಗ್ಗೆ ಪೊಲೀಸರು ಮಹಜರ್ ಕ್ರಮವನ್ನು ಜರುಗಿಸಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ, ನನ್ನ ಸಮಕ್ಷಮ ಪೊಲೀಸರು ಒಂದು ಜೊತೆ ಜುಮುಕಿ, ಒಂದು ಪ್ಲೇಟು , ಒಂದು ಉಂಗುರವನ್ನು ಚಾಸಾ-1 ರವರಿಗೆ ನೀಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ** ಶ್ರೀ ಹೆಚ್ ಸಿ ಎಸ್ **ವಕೀಲರಿಂದ.**

ಚಾಸಾ-1 ರವರು ಮಹಜರ್ ಗೆ ಸಹಿ ಮಾಡಲು ಕರೆದಿರುತ್ತಾರೆ. ಚಾಸಾ-1 ರವರು ನನಗೆ ಪರಿಚಯವಿರುತ್ತಾರೆಂದರೆ ಸರಿ. ಪೊಲೀಸರು ಠಾಣೆಯಲ್ಲಿ ನೋಟೀಸನ್ನು ನೀಡಿದ್ದು, ಅಲ್ಲೇ ಸಹಿ ಮಾಡಿರುತ್ತೇನೆ. ಠಾಣೆಯಲ್ಲಿ ಎರಡು ಕಡೆ ಸಹಿ ಮಾಡಿರುತ್ತೇನೆ. ನಾನು ಪೊಲೀಸ್ ಠಾಣೆಯಲ್ಲಿ ಕುಳಿತಿದ್ದು, ಪೊಲೀಸರು ಮಹಜರ್ ನ್ನು ಒಳಕೋಣೆಯಲ್ಲಿ ಟೈಪ್ ಮಾಡಿರುತ್ತಾರೆ. ಬೆರಳಚ್ಚು ಮಾಡಿದ ಮಹಜರ್ ಗೆ ನಂತರ ನಾನು ಸಹಿ ಮಾಡಿರುತ್ತೇನೆ. ಒಡವೆಗಳ ಡಿಸೈನ್ ಹಾಗೂ ಗ್ರಾಂ

ನನಗೆ ಗೊತ್ತಿರುವುದಿಲ್ಲ. ಒಡವೆಗಳ ತೂಕವನ್ನು ನಾನು ನೋಡಿರುವುದಿಲ್ಲ. ಛಾಯಚಿತ್ರವನ್ನು ತೆಗೆದಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ. ಚಾಸಾ-1 ನಿಮಗೆ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

Sd/-

1ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**